# ರೈತರಿಗೆ ಕಾಮಧೇನು ಕಲ್ಪವೃಕ್ಷ



ಕಲ್ಪವೃಕ್ಷ ಎಂದೇ ಕರೆಯಲ್ಪಡುವ ತೆಂಗಿನ ಬೆಳೆಯಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ವರ್ಷಪೂರ್ತಿ ಫಲ ನೀಡುವ ತೆಂಗಿನ ಮರ ರಾಜ್ಯದ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಹೇರಳ. ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಉತ್ತರ ಕನ್ನಡ, ಹಾಸನ, ತುಮಕೂರು, ಚಿತ್ರದುರ್ಗ, ಮಂಡ್ಯ, ಮೈಸೂರು, ಕೋಲಾರ, ರಾಮನಗರ, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಾಗಿವೆ. ಔಷಧ, ಅಡುಗೆ, ಸೌಂದರ್ಯವರ್ಧಕಗಳ ತಯಾರಿಕೆಯಲ್ಲಿ ಬಳಸಲ್ಪಡುವ ತೆಂಗು ಮತ್ತು ತೆಂಗಿನ ಎಣ್ಣೆ ಬೆಳೆಗಾರರಿಗೆ ಜೀವನೋಪಾಯದ ಮಾಧ್ಯಮವೂ ಆಗಿದೆ. ತೋಟಗಾರಿಕೆ ಇಲಾಖೆ ಅಂಕಿಅಂಶದ ಪ್ರಕಾರ ರಾಜ್ಯದ 4.91 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ.

## ತೆಂಗಿನ ವೈವಿಧ್ಯ

ರಾಜ್ಯದ ತೋಟಗಾರಿಕೆಯಲ್ಲಿ ತೆಂಗು ಶೇಕಡ 26ರಷ್ಟು ಪಾಲು ಹೊಂದಿದೆ. ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕೊಂದರಲ್ಲೇ ಸುಮಾರು 50-60 ಲಕ್ಷ ತೆಂಗಿನ ಮರಗಳಿರುವುದು, ಈ ಬೆಳೆಯ ವಿಸ್ತಾರಕ್ಕೆ ಸಾಕ್ಷಿ. ದೇಶದ ಪ್ರಮುಖ ಐದು ತೆಂಗು ಉತ್ಪಾದಕ ರಾಜ್ಯಗಳ ಪೈಕಿ ಕರ್ನಾಟಕಕ್ಕೆ ಅಗ್ರಸ್ಥಾನವಿದ್ದು, ತೆಂಗಿಗೆ ಸಂಬಂಧಿಸಿ ರಾಜ್ಯದಲ್ಲಿ 236 ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ. ಇವು ಬೆಳೆಗಾರರಿಗೆ ಕಾಲಕಾಲಕ್ಕೆ ಮಾರ್ಗದರ್ಶನವನ್ನೂ ನೀಡುತ್ತಿವೆ. ರಾಜ್ಯದ ಎಳನೀರಿಗೆ ಹೊರರಾಜ್ಯಗಳಲ್ಲೂ ಭಾರಿ ಬೇಡಿಕೆ ಇದೆ. ತೆಂಗು ಅಭಿವೃದ್ಧಿ ಮಂಡಳಿಯು ರೈತರಿಗೆ ನೆರವಾಗುತ್ತಿದೆ. ಹೈನುಗಾರಿಕೆ ನಂತರ ಅತಿ ಹೆಚ್ಚು ಆದಾಯ ನೀಡುವ ತೆಂಗು ಪರಂಪರೆಯ ಪ್ರತೀಕವಾಗಿ, ವರ್ತಮಾನದ ಭರವಸೆಯಾಗಿ ಕೈಹಿಡಿದಿದೆ.

ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಭಾಗದ ವಿಶಿಷ್ಟ ಸಂಸ್ಕೃತಿಗೆ ಮತ್ತಷ್ಟು ಶಕ್ತಿ ತುಂಬಿರುವುದು ತೆಂಗು ಮತ್ತು ಕಂಗು (ಅಡಕೆ). ಇವುಗಳ ಸಮೃದ್ಧವಾದ ಬೆಳೆಗೆ ಕರ್ನಾಟಕ ಹೆಸರುವಾಸಿ. ತೆಂಗು, ಅಡಕೆ ಬರೀ ವಾಣಿಜ್ಯ ಬೆಳೆಯಾಗಿ ಮಾತ್ರವಲ್ಲ ಇಲ್ಲಿನ ಜನರೊಂದಿಗೆ ಭಾವನಾತ್ಮಕ ಬಂಧವನ್ನೂ ಸ್ಥಾಪಿಸಿದೆ. ಬೆಳೆಗಾರರ ಆರ್ಥಿಕ ಬೆಳವಣಿಗೆಗೂ ಇಂಬು ನೀಡುತ್ತಿದೆ. ಯಾವುದೇ ಶುಭ ಸಮಾರಂಭವಿರಲಿ ತೆಂಗು, ಅಡಕೆ ಇಲ್ಲದೆ ಪೂರ್ಣಗೊಳ್ಳುವುದಿಲ್ಲ. ದಿನನಿತ್ಯದ ಬಳಕೆಯಲ್ಲೂ ಇವರೆಡಕ್ಕೂ ಪ್ರಮುಖ ಸ್ಥಾನ. ಅಡುಗೆಗೆ ತೆಂಗು ಬೇಕೇಬೇಕು. ಊಟದ ಬಳಿಕ ಅಡಕೆ ಜತೆ ಕವಳ ಇಲ್ಲದಿದ್ದರೆ ಹೇಗೆ...

ಕರುನಾಡು
ಹಿರಿಮೆ ಗರಿಮೆ

**ಅಡಕೆಯ ಒಗರು:** ಭಾರತದಲ್ಲಿ ಅತಿ ಹೆಚ್ಚು ಅಡಕೆ ಉತ್ಪಾದನೆಯಾಗುವುದು ಕರ್ನಾಟಕದಲ್ಲೇ. ಅಲ್ಲದೆ, ನಮ್ಮ ದೇಶದ ಒಟ್ಟು ಅಡಕೆ ಉತ್ಪಾದನೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಕರ್ನಾಟಕದ್ದಾಗಿದ್ದು, ವಾರ್ಷಿಕ ಆರು ಲಕ್ಷ ಟನ್‌ಗಿಂತಲೂ ಅಧಿಕ ಅಡಕೆ ಉತ್ಪಾದನೆಯಾಗುತ್ತಿದೆ. ರಾಜ್ಯದ 140ಕ್ಕೂ ಹೆಚ್ಚು ತಾಲೂಕುಗಳಲ್ಲಿ ಈ ವಾಣಿಜ್ಯ ಬೆಳೆ ವಿಸ್ತರಿಸಿಕೊಂಡಿರುವುದು, ಅಡಕೆಯ ಮಹಿಮೆಗೆ ಸಾಕ್ಷಿ. ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಉತ್ತರ ಕನ್ನಡ, ದಾವಣಗೆರೆ, ಚಿತ್ರದುರ್ಗ, ತುಮಕೂರುವರೆಗೂ ಅಡಕೆ ತೋಟಗಳು ಕಾಣಸಿಗುತ್ತವೆ. ಇತ್ತೀಚಿನ ವರ್ಷಗಳಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಅಡಕೆ ಬೆಳೆಯುವ ಪ್ರದೇಶ ಹೆಚ್ಚಾಗಿದೆ. ಮುಖ್ಯವಾಗಿ, ಮಲೆನಾಡಿನ ಭಾಗದ ರೈತರ ಜೀವನಾಡಿ ಈ ಅಡಕೆ ಬೇಸಾಯ. ತೆಳುವಾದ ಉದ್ದ-ಉದ್ದನೆಯ ಮರಗಳ ತೋಪನ್ನು ನೋಡುವುದೇ ಕಣ್ಣಿಗೆ ಹಬ್ಬ. ತೆಂಗು-ಈಚಲ ಮರಗಳ ಪ್ರಭೇದಕ್ಕೆ ಸೇರಿದ ಅಡಕೆ ಮರ ನೆಟ್ಟಿದ ಐದು ವರ್ಷಗಳಲ್ಲಿ ಫಲ ನೀಡಲಾರಂಭಿಸುತ್ತದೆ. ಸುಮಾರು 60 ವರ್ಷಗಳ ಕಾಲ ಫಲ ನೀಡುತ್ತವೆ. ಪ್ರತಿವರ್ಷ ನವೆಂಬರ್-ಡಿಸೆಂಬರ್ ತಿಂಗಳ ಚಳಿಗಾಲದಲ್ಲಿ ಎತ್ತರದ ಅಡಕೆ ಮರಗಳಿಂದ ಫಸಲನ್ನು ಇಳಿಸುವುದು, ಅಡಕೆ ಕಾಯಿಗಳಿಂದ ಅಡಕೆಯನ್ನು ಬೇರ್ಪಡಿಸಿ ಹದವಾಗಿ ಬೇಯಿಸಿ ದಿನಗಟ್ಟಲೆ ಬಿಸಿಲಿಗೆ ಒಣಗಿಸುವ ಪ್ರಕ್ರಿಯೆಯೇ ವಿಶಿಷ್ಟ. ಸಿರ್ಸಿ ಅಡಕೆ ಮತ್ತು ಕ್ಯಾಸನೂರು ಅಡಕೆಗೆ ಭರ್ಜರಿ ಬೇಡಿಕೆ ಇದೆ. ಪಾನ್ ಮಸಾಲಾ, ಬೀಡಾ ತಾಂಬೂಲಗಳಲ್ಲಿ ಉಪಯೋಗಿಸುವ ಅಡಕೆಗೆ ತನ್ನದೇ ಆದ ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವಿದೆ. ಅಡಕೆಯ ಮೌಲ್ಯವರ್ಧನೆಯ ಪ್ರಯತ್ನಗಳು ಕೂಡ ತೀವ್ರಗೊಂಡಿವೆ. ಪ್ಲಾಸ್ಟಿಕ್ ಬಳಕೆಯನ್ನು ತ್ಯಜಿಸಲು ಪರಿಸರಕ್ಕೆ ಪೂರಕವಾದ ಉತ್ಪನ್ನವಾಗಿ ಅಡಕೆ ಹಾಳೆಗಳನ್ನು ಬಳಸಲಾಗುತ್ತಿದೆ. ಇದು ಕೂಡ ವ್ಯವಸ್ಥಿತ ಮಾರುಕಟ್ಟೆಯ ಸ್ವರೂಪವನ್ನು ಪಡೆದುಕೊಂಡಿರುವುದು ವಿಶೇಷ.



## ವಾಣಿಜ್ಯ ಕೃಷಿಯ ಸಂಜೀವಿನಿ ಅಡಕೆ, ತೆಂಗು

### ಮುಖ್ಯಾಂಶಗಳು

- ಸಾಂಪ್ರದಾಯಿಕ ಕೃಷಿಗೆ ಸಿಗುತ್ತಿದೆ ಉತ್ತೇಜನ
- ತೆಂಗಿನ ಉಪ ಉತ್ಪನ್ನ ಮತ್ತು ಅಡಕೆಯ ಮೌಲ್ಯವರ್ಧಿತ ಉತ್ಪನ್ನಗಳಿಗೆ ಬೇಡಿಕೆ
- ವಾಣಿಜ್ಯ ದೃಷ್ಟಿಕೋನ ಮೀರಿದ ಭಾವನಾತ್ಮಕ ನಂಟು
- ಕರಾವಳಿ, ಮಲೆನಾಡಿನಿಂದ, ಅರೆ ಬಯಲುಸೀಮೆಗೂ ವಿಸ್ತರಣೆ
- ಹೊಸ ತಂತ್ರಜ್ಞಾನ, ಕೌಶಲಗಳ ಅಳವಡಿಕೆ

### ಪ್ರಮುಖ ತಳಿಗಳು

- ಕ್ಯಾಸನೂರು ಸೀಮೆ ನಾಟಿ ಅಡಕೆ
- ಸುಮಂಗಳಾ
- ಸ್ವರ್ಣಮಂಗಳ
- ಪಾಂಡವರ ಅಡಕೆ
- ಇಂಟರ್ ಮಂಗಳ
- ಮೋಹಿತ್ ನಗರ
- ಶ್ರೀಮಂಗಲ



09-11-2024
Vijayavani Pg 06

# 154 ಬೆಳ್ಳುಳ್ಳಿ ಮಾದರಿ ಬಳಸಲು ಯೋಗ್ಯ

**ಬೆಂಗಳೂರು:** ಚೀನಾದಿಂದ ಸರಬರಾಜಾಗುತ್ತಿರುವುದಾಗಿ ಹೇಳಲಾಗುತ್ತಿರುವ ನಿಷೇಧಿತ ಬೆಳ್ಳುಳ್ಳಿ ಮಾರಾಟವಾಗುತ್ತಿರುವ ಬಗ್ಗೆ ಪ್ರಚಾರವಾಗುತ್ತಿದ್ದ ಹಿನ್ನೆಲೆಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ರಾಜ್ಯಾದ್ಯಂತ ಇರುವ 154 ಬೆಳ್ಳುಳ್ಳಿ ಮಾದರಿಗಳನ್ನು ಸಂಗ್ರಹಿಸಿ ತಪಾಸಣೆ ನಡೆಸಿದೆ. ಅವುಗಳಲ್ಲಿ 147 ಮಾದರಿಗಳು ಸುರಕ್ಷಿತ ಎಂದು 7 ಮಾದರಿಗಳು ಬಳಸಲು ಯೋಗ್ಯವಲ್ಲ ಎಂದು ವರದಿಯಾಗಿದೆ. ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ, ದೀಪಾವಳಿ ಹಬ್ಬದ ಸಮಯದಲ್ಲಿ ಹೆಚ್ಚಿನ ಸಿಹಿ ತಿಂಡಿಗಳು ಮಾರಾಟವಾಗುವ ಹಿನ್ನೆಲೆಯಲ್ಲಿ 151 ಸಿಹಿತಿಂಡಿಗಳ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ಅವುಗಳಲ್ಲಿ 143 ಮಾದರಿಗಳು ಸುರಕ್ಷಿತ ಎಂದು, 09 ಮಾದರಿಗಳಲ್ಲಿ ಕೃತಕ ಬಣ್ಣಗಳ ಬಳಕೆ ಕಂಡುಬಂದಿದೆ ಎಂದು ತಿಳಿಸಿದೆ. ಹಿಂದುಳಿದ ವರ್ಗಗಳ ಹಾಸ್ಟೆಲ್ ಗಳಲ್ಲಿ 1201 ಆಹಾರ ಮಾದರಿಗಳನ್ನು ಸಂಗ್ರಹಿಸಿದ್ದು, ಅವುಗಳಲ್ಲಿ 65 ಆಹಾರ ಮಾದರಿಗಳ ವರದಿ ಬಂದಿದ್ದು, ಅವು ಸುರಕ್ಷಿತ ಎಂದು ವರದಿಯಾಗಿದೆ.

09-11-2024
Hosadiganta Pg 12

# ಮಾವು ಪರೀಕ್ಷೆಗೆ ಡಿಜಿಟಲ್ ಸಂಸ್ಕರಣೆ

## ನ.14ಕ್ಕೆ ಬೆಂಗಳೂರಿನ ಜಿಕೆವಿಕೆಯ ಕೃಷಿ ಮೇಳದಲ್ಲಿ ಉದ್ಘಾಟನೆ | ಕಡಿಮೆ ಸಮಯ, ಹೆಚ್ಚಿನ ಉತ್ಪಾದನೆ

## ಗುಣಮಟ್ಟದ ವಿಂಗಡಣೆಯೊಂದಿಗೆ ಪರಿಣಾಮಕಾರಿ ಪರಿಹಾರ | ಗ್ರೇಡಿಂಗ್ ಮಾನದಂಡಕ್ಕೆ ಸಹಕಾರಿ

■ ತೃಪ್ತಿ ಕುಮ್ರಗೋಡು

**ಉದಯವಾಣಿ ಸಮಾಚಾರ**



> ಮಾವಿನ ಹಣ್ಣಿನ ಪಕ್ವತೆಯ ಸೂಚ್ಯಾಂಕ ಹಾಗೂ ಕೊಯ್ಲೋತ್ತರ ದೋಷಗಳನ್ನು ಗುರುತಿಸಲು ಡಿಜಿಟಲ್ ಸಂಸ್ಕರಣ ವ್ಯವಸ್ಥೆಯ ತಂತ್ರಜ್ಞಾನ ಪ್ರಯೋಜನಕಾರಿ. ಗಂಟೆಗೆ 600 ರಿಂದ 800 ಕೆ.ಜಿ. ಮಾವು ಸಂಸ್ಕರಣೆ ಮಾಡಲಿದೆ. ಜತೆಗೆ ಇದು ಕೊಯ್ಲೋತ್ತರ ನಷ್ಟ ಕಡಿಮೆ ಮಾಡಿ ಹಣ್ಣುಗಳ ನಿಖರ ಮಾಹಿತಿ ನೀಡಲಿದೆ.
>
> ● ದ್ರೋಣಾಚಾರ್ಯ, ವಿಜ್ಞಾನಿ, ಕೋಯ್ಲುಕೋತ್ತರ ವಿಭಾಗ, ಜಿಕೆವಿಕೆ ಬೆಂಗಳೂರು.

**ಬೆಂಗಳೂರು:** ಮಾವಿನ ಹಣ್ಣಿನ ಪಕ್ವತೆಯ ಸೂಚ್ಯಾಂಕ ಹಾಗೂ ಕೊಯ್ಲೋತ್ತರ ದೋಷಗಳನ್ನು ಗುರುತಿಸಲು ಮಾವಿನ ಹಣ್ಣಿನ ಗುಣಮಟ್ಟ ಪರೀಕ್ಷೆಗಾಗಿ ಡಿಜಿಟಲ್ ಸಂಸ್ಕರಣ ವ್ಯವಸ್ಥೆಯನ್ನು ಬೆಂಗಳೂರಿನ ಜಿಕೆವಿಕೆ ಕೃಷಿ ವಿಜ್ಞಾನಿಗಳ ತಂಡ ಅಭಿವೃದ್ಧಿ ಪಡಿಸಿದೆ.

ರಾಜ್ಯದಲ್ಲಿ 1.73ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವನ್ನು ಬೆಳೆಯಲಾಗುತ್ತಿದೆ. ವಾರ್ಷಿಕ 16.41 ಲಕ್ಷ ಟನ್ ಉತ್ಪಾದನೆಯಾಗುತ್ತಿದೆ. ಕೋಲಾರ, ರಾಮನಗರ, ಮಂಡ್ಯ, ತುಮಕೂರು, ಚಿಕ್ಕಬಳ್ಳಾಪುರ ಮಾವು ಬೆಳೆಯುವ ಪ್ರಮುಖ ಜಿಲ್ಲೆಗಳಾಗಿವೆ. ಇಲ್ಲಿ ಇಂದಿಗೂ ಸಾಂಪ್ರದಾಯಿಕ ವಿಧಾನದಲ್ಲಿ ಗುಣಮಟ್ಟದ ಮಾವಿನ ಹಣ್ಣನ್ನು ಕೈಯ್ಯಾರೆ ವಿಂಗಡಿಸಲಾಗುತ್ತಿದೆ. ಈ ವಿಧಾನವು ಹೆಚ್ಚು ವೆಚ್ಚ ಮತ್ತು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಜತೆಗೆ ರೈತರಿಗೆ ಕಡಿಮೆ ಆದಾಯ ಬರುವಂತಾಗಿದೆ. ಇದನ್ನು ತಪ್ಪಿಸಲು ಜಿಕೆವಿಕೆ ಮಾವಿನ ಹಣ್ಣಿನ ಗುಣಮಟ್ಟ ಪರೀಕ್ಷೆಗಾಗಿ ಡಿಜಿಟಲ್ ಸಂಸ್ಕರಣ ವ್ಯವಸ್ಥೆಯ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದ್ದು, ಅದನ್ನು ನ.14ರಂದು ನಡೆಯುವ ಕೃಷಿ ಮೇಳದಲ್ಲಿ ಬಿಡುಗಡೆ ಮಾಡಲಾಗುತ್ತಿದೆ.

**ಸಂಸ್ಕರಣ ವ್ಯವಸ್ಥೆ ಹೇಗೆ?:** ಮಾವಿನ ಹಣ್ಣಿನ ಪಕ್ವತೆಯ ಸೂಚ್ಯಾಂಕ ಹಾಗೂ ಕೊಯ್ಲಿನ ನಂತರದ ದೋಷಗಳನ್ನು ಗುರುತಿಸಲು ಛಾಯಾಚಿತ್ರ ಸಂಸ್ಕರಣ ವ್ಯವಸ್ಥೆ ಅಭಿವೃದ್ಧಿಪಡಿಸಿದೆ. ಇದರಲ್ಲಿ ದೋಷಗಳನ್ನು ಪತ್ತೆ ಮಾಡಲು ಓಪನ್ ಸಿ.ವಿ., ಪೈಥಾನ್ ನಂಪೈಸ್‌ಟಾವೇರ್ ಉಪಯೋಗಿಸಿಕೊಳ್ಳಲಾಗಿದೆ. ಈ ವ್ಯವಸ್ಥೆಯು ಕಡಿಮೆ ವೆಚ್ಚದ, ವಿನಾಶಕಾರಿಯಲ್ಲದ ಸಂವೇದನಾ ತಂತ್ರಜ್ಞಾನ ಮಾವಿನ ಬಣ್ಣ, ಪಕ್ವತೆ, ಬಾಹ್ಯ ಹಾನಿ ಮತ್ತು ಕಪ್ಪು ಚುಕ್ಕೆಗಳ ಆಧಾರದ ಮೇಲೆ ಹಣ್ಣುಗಳನ್ನು ವಿಂಗಡಿಸಲು ಸಮರ್ಥವಾಗಿದೆ. ಇದು ಕೈಗಳಿಂದ ವಿಂಗಡಣೆ ಮಾಡುವ ವಿಧಾನಕ್ಕೆ ಪರ್ಯಾಯವಾಗಿದೆ.

**ಮಲ್ಲಿಕಾ ತಳಿ ಆಯ್ಕೆ!:** ಛಾಯಾಚಿತ್ರ ಸಂಸ್ಕರಣ ವ್ಯವಸ್ಥೆಯು ಹಾರ್ಡ್‌ವೇರ್ ಮತ್ತು ಸಾಫ್ಟವೇರ್ ಎಂಬ 2 ಪ್ರಮುಖ ವಿಭಾಗಗಳನ್ನು ಒಳಗೊಂಡಿದೆ. ಈ ವ್ಯವಸ್ಥೆಯ ಕಾರ್ಯಕ್ಷಮತೆಯ ಮೌಲ್ಯ ಮಾಪನಕ್ಕಾಗಿ ಮಲ್ಲಿಕಾ ತಳಿಯ ಮಾವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಭಿವೃದ್ಧಿ ಪಡಿಸಿರುವ ವ್ಯವಸ್ಥೆಯು ಮಾವಿನ ಹಣ್ಣಿನ ಪಕ್ವತೆಯ ಸೂಚ್ಯಾಂಕಗಳ (ಸಿಪ್ಪೆಯ ಬಣ್ಣ ಮತ್ತು ಲೆಂಟಿಸಲ್) ಮತ್ತು ಕೊಯ್ಲಿನ ನಂತರದ ದೋಷಗಳ (ಕಪ್ಪು ಕಲೆಗಳು ಮತ್ತು ಹೊರಗಿನ ಹಾನಿಗಳು) ಆಧಾರದ ಮೇಲೆ ಮಾವನ್ನು ವಿಂಗಡಿಸುತ್ತದೆ. ಇದರ ಸ್ವಾಫ್ಟ್‌ವೇರ್‌ನಲ್ಲಿ ಬದಲಾವಣೆ ಮಾಡಿಕೊಂಡು ಇತರೆ ಹಣ್ಣು ಹಾಗೂ ತರಕಾರಿಯನ್ನು ಸಹ ಮೌಲ್ಯಮಾಪನ ಮಾಡಬಹುದಾಗಿದೆ.

**ಪ್ರಯೋಜನವೇನು?:** ಇದು ಕಡಿಮೆ ಸಮಯ ಬಳಸಿ ಹೆಚ್ಚಿನ ಉತ್ಪಾದನೆ, ಗುಣಮಟ್ಟದ ವಿಂಗಡಣೆಯೊಂದಿಗೆ ಪರಿಣಾಮಕಾರಿ ಪರಿಹಾರ ನೀಡುತ್ತದೆ. ಜತೆಗೆ ಮಾವು ಹಾಳಾಗುವುದು ತಡೆಯುತ್ತದೆ. ಈ ಉಪಕರಣ ಬಳಸುವ ಮೂಲಕ ತುರ್ತು ಉದ್ದೇಶಕ್ಕಾಗಿ ಅಗತ್ಯವಿರುವ ಗ್ರೇಡಿಂಗ್ ಮಾನದಂಡಗಳನ್ನು ಪೂರೈಸಲಾಗುತ್ತದೆ. ಮುಖ್ಯವಾಗಿ ರೈತರಿಗೆ, ಪ್ಯಾಕ್ ಹೌಸ್‌ಗಳಿಗೆ, ವ್ಯಾಪಾರಿಗಳಿಗೆ ಮತ್ತು ತೋಟಗಾರಿಕೆ ಇಲಾಖೆಯವರಿಗೆ ಸಹಕಾರಿಯಾಗಲಿದೆ. ಇದರಿಂದ ರೈತರಿಗೆ ಮಾವಿನ ಗುಣಮಟ್ಟದ ಆಧಾರದಲ್ಲಿ ಉತ್ತಮ ದರ ಲಭಿಸುವ ಸಾಧ್ಯತೆಯಿದೆ.

09-11-2024
Udayavani Pg 09

# ಆಹಾರ ಗುಣಮಟ್ಟ ಪರೀಕ್ಷೆಗೆ ಕ್ರಮ

**ಬೆಂಗಳೂರು:** ಜನರು ಸೇವಿಸುವ ಆಹಾರದ ಗುಣಮಟ್ಟ ಪರೀಕ್ಷಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

ಚೀನಾದಿಂದ ಸರಬರಾಜು ಆಗುತ್ತಿರುವ ನಿಷೇಧಿತ ಬೆಳ್ಳುಳ್ಳಿ ರಾಜ್ಯಾದ್ಯಂತ ಮಾರಾಟವಾಗುತ್ತಿದೆ ಎಂಬ ಪ್ರಚಾರದ ಬಗ್ಗೆ ತನಿಖೆ ನಡೆಸಲಾಗಿದೆ. ರಾಜ್ಯಾದ್ಯಂತ 154 ಮಾದರಿಯ ಬೆಳ್ಳುಳ್ಳಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರಲ್ಲಿ 147 ಮಾದರಿ ಸುರಕ್ಷಿತವಾಗಿವೆ. 5 ಮಾದರಿಗಳು ಅಸುರಕ್ಷಿತ ಎಂದು ವರದಿಯಾಗಿದೆ. ದೀಪಾವಳಿ ಪ್ರಯುಕ್ತ ಮಾರಾಟ ಮಾಡುತ್ತಿದ್ದ 151 ಮಾದರಿಯ ಸಿಹಿ ತಿಂಡಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಯಿತು. ಅದರಲ್ಲಿ 143 ಮಾದರಿಯ ಸಿಹಿ ತಿಂಡಿಗಳು ಒಳ್ಳೆಯ ಗುಣಮಟ್ಟ ಹೊಂದಿದ್ದು, 9 ಮಾದರಿಯ ಸಿಹಿ ತಿಂಡಿಗಳಿಗೆ ಕೃತಕ ಬಣ್ಣದ ಲೇಪನ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಈ ಹಿಂದೆ ಹೊರ ರಾಜ್ಯಗಳಲ್ಲಿ ಗೋಲ್ಗಪ್ಪಾ ರುಚಿ ಹೆಚ್ಚಿಸಲು ಹಾರ್ಪಿಕ್ ಮತ್ತು ಯೂರಿಯಾ ಗೊಬ್ಬರ ಬಳಸಲಾಗುತ್ತಿದೆ ಮತ್ತು ಗೋಲ್ ಗಪ್ಪಾ ಹಿಟ್ಟನ್ನು ಕಾಲಿನಿಂದ ತುಳಿಯಲಾಗುತ್ತಿದೆ ಎಂದು ಮಾಧ್ಯಮದಲ್ಲಿ ವರದಿಯಾಗಿತ್ತು. ಈ ಕುರಿತಂತೆ ರಾಜ್ಯಾದ್ಯಂತ ಗೋಲ್ ಗಪ್ಪಾ ಮಾದರಿಯನ್ನು ಸಹ ಗುಣಮಟ್ಟದ ಪರೀಕ್ಷೆಗೆ ಒಳಪಡಿಸಲಾಗುವುದು ಎಂದರು.

» ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಆಯುಕ್ತರ ಮಾಹಿತಿ

ಅಕ್ಟೋಬರ್ ಕೊನೆಯ ವಾರದಲ್ಲಿ ಹಿಂದುಳಿದ ವರ್ಗದ ಹಾಸ್ಟೆಲ್‌ನಿಂದ 1,201 ಆಹಾರ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದ್ದು, ಅವುಗಳಲ್ಲಿ 65 ಆಹಾರ ಸುರಕ್ಷಿತವಾಗಿವೆ. ಕೇರಳದ ಗಡಿ ಜಿಲ್ಲೆಗಳಲ್ಲಿ ತಯಾರಾಗುವ ಖಾರಾ ಮಿಕ್ಸ್ಚರ್, ಚಿಪ್ಸ್, ಹಲ್ವಾ, ಮುರುಕು ಡ್ರೈ ಫ್ರೂಟ್ಸ್ ಸೇರಿ 90 ರೀತಿಯ ಪದಾರ್ಥಗಳನ್ನು ಪರೀಕ್ಷೆ ಮಾಡಲಾಗಿದ್ದು, 31 ಮಾದರಿಗಳಲ್ಲಿ ಅಲೂರ್ ರೇಡ್, ಸನ್ ಸೇಟ್ ಯಲ್ಲೋ ಸೇರಿ ಮಾರಣಾಂತಿಕವಾದ ಕೃತಕ ಬಣ್ಣಗಳನ್ನು ಬಳಸಲಾಗಿದೆ. ಹಲವಾರು ಪದಾರ್ಥಗಳ ಪ್ಯಾಕೇಟ್ ಮೇಲೆ ಪರವಾನಿಗೆ ಸಂಖ್ಯೆ, ದಿನಾಂಕ ಇಲ್ಲ ಎಂದು ತಿಳಿಸಿದರು.

09-11-2024
Vijayavani Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in

09-11-2024
Udayavani Pg 03

# ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಕೃಷಿ ಪರಿಚಯ!

## ಕೃಷಿ ಕಾಯಕದ ಅನುಭವ ನಗರವಾಸಿ ಮಕ್ಕಳಿಗೆ ಮನದಟ್ಟು ಮಾಡಲು 'ಕೃಷಿ ಪ್ರವಾಸೋದ್ಯಮ' : ಸಚಿವ ಎಚ್.ಕೆ.ಪಾಟೀಲ್

■ ಅಮರೇಗೌಡ ಗೋನವಾರ

**ಉದಯವಾಣಿ ಸಮಾಚಾರ**





**ಹುಬ್ಬಳ್ಳಿ:** ಹಸುವಿನ ಹಾಲು ಹಿಂಡುವುದು ಹೇಗೆ, ಹೊಲದೊಳಗಿಳಿದು ಸುತ್ತಾಡುವ, ಟೊಮೆಟೊ ಹಣ್ಣಿನ ಗಿಡಗಳಿಂದ ಹಣ್ಣು ಕಿತ್ತು ತಿನ್ನುವ ಸವಿ-ಮಜಾ ಎಂತಹದ್ದು, ಕೃಷಿ ಕಾಯಕದ ಅನುಭವ ಹ್ ೀ ಗಿ ರ ು ತ್ ತ ದ್ ಎಂಬುದನ್ನು ನಗರ ವಾಸಿ ಮಕ್ಕಳಿಗೆ ಮನದಟ್ಟು ಮಾಡಿಕೊಡಲು 'ಕೃಷಿ ಪ್ರವಾಸೋದ್ಯಮ' ಆರಂಭಿಸಲಾಗುತ್ತಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಹೇಳಿದ್ದಾರೆ.

'ಉದಯವಾಣಿ' ಜತೆ ಮಾತನಾಡಿದ ಅವರು, ಪ್ರವಾಸ ಎನ್ನುವುದು ಕೇವಲ ಮೋಜು-ಮಸ್ತಿಗೆ ಸೀಮಿತವಾಗದೆ, ಜ್ಞಾನ-ಅನುಭವದ ಆಗರವಾಗಬೇಕು, ಸಂತೋಷ ತರುವಂತಾಗಬೇಕು. ಈ ನಿಟ್ಟಿನಲ್ಲಿ ನೂತನ ಪ್ರವಾಸೋದ್ಯಮ ನೀತಿ ರೂಪಿಸಲಾಗಿದೆ ಎಂದರು.

**25 ವಿಷಯಾಧಾರಿತ ಕ್ಷೇತ್ರ:** ಪ್ರವಾಸೋದ್ಯಮ ಅಭಿವೃದ್ಧಿಗೆ 25 ವಿಷಯಾಧಾರಿತ ಕ್ಷೇತ್ರಗಳು ಹಾಗೂ 44 ಪ್ರವಾಸೋದ್ಯಮ ಯೋಜನೆಗಳನ್ನು ಗುರುತಿಸಲಾಗಿದೆ. ಸಾಹಸ, ಕೃಷಿ, ಕಾರವಾನ್, ಕರಾವಳಿ, ಪಾಕ ಪದ್ಧತಿ, ಸಾಂಸ್ಕೃತಿಕ, ಪಾರಂಪರಿಕ, ವೈದ್ಯಕೀಯ, ಬುಡಕಟ್ಟು, ಗ್ರಾಮೀಣ, ಗಣಿಗಾರಿಕೆ, ಕ್ರೀಡಾ, ವಿವಾಹ, ಸ್ವಾಸ್ಥ್ಯ ಹೀಗೆ ವಿವಿಧ ಕ್ಷೇತ್ರಗಳನ್ನು ಪಟ್ಟಿ ಮಾಡಲಾಗಿದೆ ಎಂದರು. ನಗರವಾಸಿ ಮಕ್ಕಳಿಗೆ ಆಹಾರ ಧಾನ್ಯಗಳು, ಕೃಷಿ ಉತ್ಪನ್ನಗಳ ಮೂಲ ಪರಿಚಯ ಇಲ್ಲವಾಗಿದ್ದು, ಅದನ್ನು ಪರಿಚಯಿಸಬೇಕಿದೆ. ಕೆಚಪ್ ತಿನ್ನುವ ಮಕ್ಕಳು ಹೊಲದಲ್ಲಿ ಬೆಳೆದು ನಿಂತ ಟೊಮೆಟೊ ಹಣ್ಣು ಕಿತ್ತು ತಿಂದು ಮಜಾ ಅನುಭವಿಸುವಂತಾಗಬೇಕು. ಇದು ರೈತರಿಗೂ ಆದಾಯ ಮೂಲವಾಗಲಿದೆ. ಎಲ್ಲ ಆಯಾಮಗಳೊಂದಿಗೆ ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಗೆ ಯೋಜಿಸಲಾಗಿದೆ ಎಂದು ವಿವರಿಸಿದರು.

ಪ್ರವಾಸೋದ್ಯಮವನ್ನು ಸೀಮಿತ ದೃಷ್ಟಿಯಿಂದ ನೋಡಲಾಗುತ್ತಿದೆ. ಉದ್ಯೋಗ, ಸಾಮಾಜಿಕ-ಆರ್ಥಿಕಾಭಿವೃದ್ಧಿ, ಜ್ಞಾನರ್ಜನೆ, ವ್ಯಾಪಾರ-ವಹಿವಾಟು ಬೆಳವಣಿಗೆ, ಸ್ಥಳೀಯ ಉತ್ಪನ್ನಗಳಿಗೆ ಮೆರುಗು, ಆಧ್ಯಾತ್ಮ ದೃಷ್ಟಿಯಿಂದ ನೋಡಿದರೆ ಪ್ರವಾಸೋದ್ಯಮ ವ್ಯಾಪ್ತಿ ದೊಡ್ಡದಾಗಿ, ಮಹತ್ವ ಹೆಚ್ಚುತ್ತದೆ ಎಂದು ಅಭಿಪ್ರಾಯಪಟ್ಟರು.

**47 ಸಾವಿರ ನೌಕರಿ:** ರಾಜ್ಯದಲ್ಲಿ ಪ್ರವಾಸಿಗರ ಸಂಖ್ಯೆ ವಾರ್ಷಿಕ ಸರಾಸರಿ 26 ಕೋಟಿಯಷ್ಟಿದೆ. ಬೆಳಗಾವಿ ಜಿಲ್ಲೆ ಸವದತ್ತಿಯ ಯಲ್ಲಮ್ಮನ ಗುಡ್ಡಕ್ಕೆ ವಾರ್ಷಿಕ ಅಂದಾಜು 1.25 ಕೋಟಿ ಭಕ್ತರು ಭೇಟಿ ನೀಡುತ್ತಿದ್ದಾರೆ. ರಾಜ್ಯ ಸುಮಾರು 370 ಕಿ.ಮೀ.ನಷ್ಟು ಕಡಲ ಗಡಿ ಹೊಂದಿದೆ. ಇದನ್ನು ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿಪಡಿಸಬೇಕಾಗಿದೆ. ಕಲ್ಯಾಣ ಕರ್ನಾಟಕದಲ್ಲಿ ಸುಮಾರು 30 ಸಾವಿರ ಸೇರಿ ರಾಜ್ಯದಲ್ಲಿ ಕನಿಷ್ಠ 47 ಸಾವಿರ ಉದ್ಯೋಗ ಸೃಷ್ಟಿ ಗುರಿ ಹಾಗೂ ಲಕ್ಷ ಜನರಿಗೆ ಪರೋಕ್ಷ ಮತ್ತು ಪ್ರೇರಿತ ಉದ್ಯೋಗ ಸೃಷ್ಟಿಸುವ ಪ್ರಯತ್ನ ನಡೆದಿದೆ ಎಂದರು.

ಮುಂದಿನ 5 ವರ್ಷಗಳಲ್ಲಿ ಸುಮಾರು 48 ಕೋಟಿ ದೇಶಿ ಪ್ರವಾಸಿಗರ ಭೇಟಿಯೊಂದಿಗೆ ಕರ್ನಾಟಕ ದೇಶದಲ್ಲಿಯೇ ಮೊದಲ ಮೂರು ರಾಜ್ಯಗಳಲ್ಲಿ ಒಂದಾಗಬೇಕು, ಸುಮಾರು 20 ಲಕ್ಷ ವಿದೇಶಿ ಪ್ರವಾಸಿಗರ ಆಕರ್ಷಣೆಯೊಂದಿಗೆ, ಮೊದಲ ಐದು ರಾಜ್ಯಗಳಲ್ಲಿ ಸ್ಥಾನ ಪಡೆಯಬೇಕು. ಪ್ರವಾಸೋದ್ಯಮ ಇಲಾಖೆ ಮಾಲೀಕತ್ವದ ಸುಮಾರು 680 ಎಕರೆ ಭೂಮಿ ಪ್ರವಾಸೋದ್ಯಮ ವೀಕ್ಷಣೆ ಯೋಜನೆಗಳಿಗೆ ಬಳಕೆ, ಒಂದು ಜಿಲ್ಲೆ-ಒಂದು ತಾಣ'ದಡಿ ಪ್ರತಿ ಜಿಲ್ಲೆಗೆ ಒಂದಂತೆ ಕನಿಷ್ಠ 30 ಪ್ರವಾಸಿ ತಾಣಗಳ ಅಭಿವೃದ್ಧಿ, ಕರ್ನಾಟಕವನ್ನು ಕನಿಷ್ಠ 50 ಅಂತಾರಾಷ್ಟ್ರೀಯ ಮೇಳಗಳಲ್ಲಿ ಪ್ರಚುರಪಡಿಸುವ ಯೋಜನೆ ಹೊಂದಲಾಗಿದೆ ಎಂದು ತಿಳಿಸಿದರು.

### ಪಿಪಿಪಿ ಮಾದರಿ ಅಭಿವೃದ್ಧಿ

ಖಾಸಗಿ ಸಹಭಾಗಿತ್ವದಡಿ ನೂತನ ಪ್ರವಾಸೋದ್ಯಮ ನೀತಿ ಜಾರಿಗೆ ನಿರ್ಧರಿಸಲಾಗಿದ್ದು, ಅಂದಾಜು 1,500 ಕೋಟಿ ರೂ. ಹೂಡಿಕೆ ಹಾಗೂ ಅಂದಾಜು 7,800 ಕೋಟಿ ರೂ. ಹೂಡಿಕೆ ಆಕರ್ಷಿಸುವ ಯೋಜನೆ ಹೊಂದಲಾಗಿದೆ. ಹೂಡಿಕೆ ಉತ್ತೇಜನಕ್ಕೆ 9 ಪ್ರೋತ್ಸಾಹ, 2 ರೀತಿಯ ಸಹಾಯಧನ ಹಾಗೂ 7 ರೀತಿಯ ರಿಯಾಯಿತಿ ನೀಡಲು ಯೋಜಿಸಲಾಗಿದೆ. ಅಲ್ಲದೇ ಯೋಜನೆ ವೆಚ್ಚದ 100 ರೂ.ಗಳಲ್ಲಿ 80 ರೂ.ಗಳನ್ನು ಸಂತೋಷದಾಯಕ ಪ್ರವಾಸೋದ್ಯಮ ಹಾಗೂ ಇನ್ನುಳಿದ 20 ರೂ.ಗಳನ್ನು ಮೋಜು-ಮಸ್ತಿ ಪ್ರವಾಸೋದ್ಯಮಕ್ಕೆ ವಿನಿಯೋಗಿಸುವ ಚಿಂತನೆ ಹೊಂದಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

# Newspaper Clippings


# ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ರದ್ದತಿಗೆ ಚಿಂತನೆ



**ಮೈಸೂರು:** ರೈತರ ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ಮಾನದಂಡ ರದ್ದು ಮಾಡಲು ಚಿಂತನೆ ನಡೆಸಿರುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿವಿ (ಕೆಎಸ್‌ಒಯು) ಘಟಿಕೋತ್ಸವ ಭವನದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅವರು, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರ್ ಶಾಂತಕುಮಾರ್ ನೇತೃತ್ವದಲ್ಲಿ ರೈತ ಮುಖಂಡರುಗಳು ಕೃಷಿ ಉತ್ಪನ್ನಗಳ ಮೇಲಿನ ಜಿಎಸ್‌ಟಿ ತೆರಿಗೆ ರದ್ದು ಮಾಡುವುದು, ರೈತ ಉತ್ಪಾದಕ ಸಂಸ್ಥೆಗಳ ವರಮಾನ ತೆರಿಗೆ ಹಾಗೂ ಎಂಐಟಿ ತೆರಿಗೆ ಕಾನೂನು ರದ್ದು ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಲ್ಲಿಸಿದ ಮನವಿಯನ್ನು ಸ್ವೀಕರಿಸಿ ಈ ಮಾಹಿತಿ ನೀಡಿದರು. ➔ಪುಟ 9

## ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ರದ್ದತಿಗೆ ಚಿಂತನೆ

ಪುಟ 1➔ ಮೈಕ್ರೋ ಫೈನಾನ್ಸ್‌ಗಳು ಮಹಿಳಾ ಸಂಘಗಳಿಗೆ ಸಾಲ ನೀಡಿ ಕಿರುಕುಳ ನೀಡುತ್ತಿವೆ. ಇದನ್ನು ತಪ್ಪಿಸಲು ವಿಶೇಷ ಕಠಿಣ ಕಾನೂನು ಜಾರಿಗೆ ತರುವ ಬಗ್ಗೆ ಚಿಂತನೆ ನಡೆಸುವುದಾಗಿ ಸಚಿವರು ತಿಳಿಸಿದರು. ಕೃಷಿ ಚಟುವಟಿಕೆ ಮಾಡುವ ರೈತರಿಗೆ ಯಾವುದೇ ತೆರಿಗೆ ವಿಧಿಸಿಲ್ಲ. ಜಿಎಸ್‌ಟಿ ಬಗ್ಗೆ ನಿಮ್ಮ ರಾಜ್ಯದ ಸಚಿವರು ಮಂಡಳಿ ಸಭೆಯಲ್ಲಿ ಚರ್ಚೆ ಮಾಡಲು



ಅವಕಾಶವಿದೆ. ರೈತ ಉತ್ಪಾದಕ ಸಂಸ್ಥೆಗಳಿಗೆ ಎಂಎಟಿ ತೆರಿಗೆ ಕೂಡ ಇರುವುದಿಲ್ಲ. ಇಲಾಖೆ ವತಿಯಿಂದ ನೋಟಿಸ್ ಬಂದಿದ್ದರೆ ದಾಖಲಾತಿ ಕೊಡಿ ಎಂದಾಗ, ರೈತ ಮಿತ್ರ, ರೈತ ಉತ್ಪಾದಕ ಸಂಸ್ಥೆಗೆ ಬಂದಿದೆ ಎಂದು ಕುರುಬೂರು ಶಾಂತಕುಮಾರ್ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವರು, ನೋಟಿಸ್‌ನ ಪ್ರತಿಯನ್ನು ತಮಗೆ ಕಳುಹಿಸುವಂತೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ಸೂಚಿಸಿದರು.

09-11-2024
Hosadiganta Pg 01

09-11-2024
V-karnataka Pg 06

## ರಾಜ್ಯದ ಜೇನುತುಪ್ಪಕ್ಕೆ ಝೇಂಕಾರ್ ಹೆಸರು

**ಬೆಂಗಳೂರು:** ರಾಜ್ಯದ ಜೇನುತುಪ್ಪವನ್ನು ಜನಪ್ರಿಯಗೊಳಿಸಲು, ಗ್ರಾಹಕರಿಗೆ ಗುಣಮಟ್ಟದ ಜೇನುತುಪ್ಪ ದೊರಕುವಂತೆ ಮಾಡಲು ಹಾಗೂ ಜೇನು ಕೃಷಿಕರ ಆರ್ಥಿಕ ಮಟ್ಟ ಹೆಚ್ಚಿಸಲು ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ



ಜೇನುತುಪ್ಪಕ್ಕೆ ತೋಟಗಾರಿಕೆ ಇಲಾಖೆಯು ಝೇಂಕಾರ್ ಬ್ರ್ಯಾಂಡ್ ಹೆಸರನ್ನು ಸೂಚಿಸಿ ಜೀವನೋಲ್ಲಾಸಕ್ಕೆ ಜೇನು ಎಂಬ ಟ್ಯಾಗ್‌ಲೈನ್ ನೀಡಿ ಲೋಗೋ ಮತ್ತು ಪ್ಯಾಕಿಂಗ್ ವಿನ್ಯಾಸಗಳನ್ನು ಅಭಿವೃದ್ಧಿ ಪಡಿಸಿ ಟ್ರೇಡ್ ಮಾರ್ಕ್ ರಿಜಿಸ್ಟ್ರಿಯಿಂದ ಅಧಿಕೃತ ಅನುಮೋದನೆ ಪಡದಿರುತ್ತದೆ. ತೋಟಗಾರಿಕಾ ಇಲಾಖೆಯೇ ಈ ಬ್ರಾಂಡ್ನ ಮಾಲೀಕತ್ವವನ್ನೂ ಸಹ ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಇಲಾಖೆಯ ಜಾಲತಾಣ https://horticulturedir.karnataka.gov.in ಅಥವಾ ಇ-ಮೇಲ್ ವಿಳಾಸ additionaldirectorropdpgmail.com ಅಥವಾ ಅಪರ ನಿರ್ದೇಶಕರು, ತಾಳೆಬೆಳೆ ವಿಭಾಗ, ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು ಹಾಗೂ ಜಿಲ್ಲಾ ತೋಟಗಾರಿಕಾ ಉಪ ನಿರ್ದೇಶಕರ ಕಚೇರಿ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

09-11-2024
Viswavani Pg 03

## ತೋಟಗಾರಿಕೆ ಉತ್ತೇಜನಕ್ಕೆ ಕಿಸಾನ್ ಮಾಲ್ ಆರಂಭ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ತೋಟಗಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದ ತಾಂತ್ರಿಕ ಸಲಹೆ, ಮಾರುಕಟ್ಟೆ ಸಂಪರ್ಕ, ಬೇಸಾಯ ಪರಿಕರಗಳ ಮತ್ತು ಉತ್ಪನ್ನಗಳನ್ನು ಒಂದೇ ಸೂರಿನಲ್ಲಿ ಒದಗಿಸುವ ಮೈಸೂರು ಕಿಸಾನ್ ಮಾಲ್ ಮೈಸೂರು, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಪ್ರಾರಂಭಿಸಲು ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿದೆ. ಕಿಸಾನ್ ಮಾಲ್ ಪ್ರಾರಂಭಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಘೋಷಿಸಿದ್ದು, ರೈತ ಉತ್ಪಾದಕ ಸಂಸ್ಥೆಗಳ (ಎಫ್‌ಪಿಒ) ಸಹಭಾಗಿತ್ವದಲ್ಲಿ ಯೋಜನೆ ಅನುಷ್ಠಾನಕ್ಕೆ ತರಲು ತೋಟಗಾರಿಕಾ ಇಲಾಖೆ ಸಜ್ಜಾಗಿದೆ. ಎರಡು ತಿಂಗಳಲ್ಲಿ ಕಿಸಾನ್ ಮಾಲ್ ಕಾರ್ಯಾರಂಭ ಆಗಲಿದ್ದು, ಮುಂದಿನ ದಿನಗಳಲ್ಲಿ ಏಳು ಜಿಲ್ಲೆಗಳಿಗೆ ವಿಸ್ತರಿಸಲಾಗುವುದು.

**ಒಂದೇ ಸೂರಿನಡಿ ಎಲ್ಲ ಸೌಲಭ್ಯ:** ಬೀಜ, ಸಸ್ಯ ಪೋಷಕಾಂಶಗಳು, ಮಾರುಕಟ್ಟೆ ಸಂಪರ್ಕ, ತಾಂತ್ರಿಕ ಸಲಹೆ ಸೇರಿದಂತೆ ತೋಟಗಾರಿಕೆ ಬೆಳೆಗಳಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಒಂದೇ ಸೂರಿನಡಿ ರೈತರಿಗೆ ಕಲ್ಪಿಸುವುದು ಈ ಮಾಲ್‌ಗಳ ಉದ್ದೇಶವಾಗಿದೆ. ಇಲ್ಲಿ ಕಾರ್ಯನಿರ್ವಹಿಸುವ ವಿಷಯ ತಜ್ಞರು ರೈತರಿಗೆ ಬೆಳೆ ನಿರ್ವಹಣೆ, ಕೀಟ ಮತ್ತು ರೋಗಗಳ ನಿರ್ವಹಣೆ ಮಾಡುವುದರ ಕುರಿತು ಸಲಹೆಗಳನ್ನೂ ನೀಡಲಿದ್ದಾರೆ. ಕಿಸಾನ್ ಮಾಲ್‌ನ ಸಿಬ್ಬಂದಿ ರೈತರು ಬೆಳೆದ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಾರ್ಗದರ್ಶನ ಮಾಡಲಿದ್ದು, ವಿವಿಧ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯದ ಮಾಹಿತಿ ಸೇರಿದಂತೆ, ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ಕೊಯ್ಲೋತ್ತರ ತಂತ್ರಜ್ಞಾನ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ದೊರಕುವ ಸಹಾಯಧನಗಳ ಬಗ್ಗೆಯೂ ಸಲಹೆ ನೀಡಲಿದ್ದಾರೆ.

09-11-2024
Viswavani Pg 03

### ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಸೂಚ್ಯಂಕ ಬಿಡುಗಡೆ

### ಪ್ರತಿಕೂಲ ಹವಾಮಾನದಿಂದ ಉತ್ಪಾದನೆಯಲ್ಲಿ ಸ್ಥಿರತೆ ಇಲ್ಲ

# ಜಾಗತಿಕ ಆಹಾರ ಬೆಲೆ ಹೆಚ್ಚಳ

**ಪ್ಯಾರಿಸ್:** ಜಗತ್ತಿನ ಆಹಾರ ಬೆಲೆ ಸೂಚ್ಯಂಕವು ಕಳೆದ 18 ತಿಂಗಳಲ್ಲೇ ಗರಿಷ್ಠ ಮಟ್ಟ ತಲುಪಿದೆ.

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್‌ಎಒ) ಜಾಗತಿಕ ಆಹಾರ ಬೆಲೆ ಸೂಚ್ಯಂಕವನ್ನು ಪ್ರಕಟಿಸಿದೆ. ಸೆಪ್ಟೆಂಬರ್‌ನಲ್ಲಿ ಈ ಸೂಚ್ಯಂಕವು 124.9 ಅಂಶಗಳಿತ್ತು. ಅದು ಅಕ್ಟೋಬರ್‌ನಲ್ಲಿ 127.4 ಅಂಶಕ್ಕೆ ಏರಿಕೆಯಾಗಿದೆ. ಸೂಚ್ಯಂಕವು 2023ರ ಏಪ್ರಿಲ್‌ನಲ್ಲಿ ಒಮ್ಮೆ ಆಹಾರ ಬೆಲೆ ಗರಿಷ್ಠ ಮಟ್ಟ ತಲುಪಿತ್ತು. ಆ ಬಳಿಕ ಅಂದರೆ 18 ತಿಂಗಳ ಸೂಚ್ಯಂಕ ಗರಿಷ್ಠ ಮಟ್ಟ ತಲುಪಿದೆ.

ಅಡುಗೆ ಎಣ್ಣೆ ಬೆಲೆ ಶೇ.7ರಷ್ಟು ಏರಿಕೆಯಾಗಿದೆ. ತಾಳೆ ಉತ್ಪಾದನೆಯಲ್ಲಿನ ಕುಸಿತ ಈ ಬೆಲೆ ಏರಿಕೆಗೆ ಕಾರಣ ಎಂದು ಅಂದಾಜಿಸಲಾಗಿದೆ. ಮಾಂಸದ ಬೆಲೆಯೂ ಗಣನೀಯವಾಗಿ ಏರಿಕೆಯಾಗಿದೆ. ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಅಡುಗೆ ಎಣ್ಣೆ ಬೆಲೆಯಲ್ಲಿ ಭಾರಿ ಏರಿಕೆ ಉಂಟಾಗಿರುವುದರಿಂದ ಆಹಾರ ಬೆಲೆಯೂ ಗಣನೀಯವಾಗಿ ಏರಿಕೆ ಕಂಡಿದೆ ಎಂದು ಎಫ್‌ಎಒ ತಿಳಿಸಿದೆ.

**18 ತಿಂಗಳಲ್ಲೇ ಗರಿಷ್ಠ**




09-11-2024
Udayavani Pg 03

### 45 ಸಂಕಷ್ಟ ದೇಶಗಳಿಗೆ ಬೇಕು ಆಹಾರ ಅಭಯ

ಆಹಾರದ ಕೊರತೆಯ ತೀವ್ರತೆ ಎಷ್ಟಿದೆ ಎಂದರೆ 45 ದೇಶಗಳಿಗೆ ಬಾಹ್ಯ ನೆರವು ಬೇಕಾಗಿದೆ. ಐದು ದೇಶಗಳ ಪರಿಸ್ಥಿತಿ ಶೋಚನೀಯವಾಗಿದೆ ಎಂದು ಎಫ್‌ಎಒ ವರದಿ ತಿಳಿಸಿದೆ. ಆಫ್ರಿಕಾದ 33 ದೇಶಗಳು, ಏಷ್ಯಾದ ಒಂಬತ್ತು, ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್‌ನ ಎರಡು ಮತ್ತು ಯುರೋಪ್‌ನ ಒಂದು ದೇಶದಲ್ಲಿನ ಪರಿಸ್ಥಿತಿಯನ್ನು ಸಮಗ್ರವಾಗಿ ವಿವರಿಸಲಾಗಿದೆ. ಸಂಘರ್ಷ, ಅಭದ್ರತೆಯು ಆಹಾರ ಸುರಕ್ಷತೆಗೆ ಕಂಟಕವಾಗಿದೆ. ಗಾಜಪಟ್ಟಿ, ಹೈಟಿ, ಮಾಲಿ, ಮತ್ತು ಸೂಡಾನ್‌ಗಳಲ್ಲಿ ಆಹಾರದ ಅಭಾವ ತೀವ್ರವಾಗಿದೆ. ಕಡಿಮೆ ಆದಾಯ ಹಾಗೂ ಆಹಾರದ ಕೊರತೆ ಇರುವ 44 ದೇಶಗಳಲ್ಲಿ ಏಕದಳ ಧಾನ್ಯಗಳ ಪ್ರಮಾಣ ಕಳೆದ ಐದು ವರ್ಷಗಳ ಸರಾಸರಿ ಪ್ರಮಾಣಕ್ಕಿಂತಲೂ ಹೆಚ್ಚಿದೆ ಎಂದು ಅಂದಾಜು ಮಾಡಲಾಗಿದೆ. ಆಫ್ರಿಕಾದ ಕೆಲ ಭಾಗಗಳಲ್ಲಿ ಕಡಿಮೆ ಇಳುವರಿ ಇದೆ. ಕೆಲವೆಡೆ ಹೆಚ್ಚಿದೆ. ಹೀಗಾಗಿ ಆಮದು ಪ್ರಮಾಣದಲ್ಲಿ ಶೇ. 8ರಷ್ಟು ಏರುವ ನಿರೀಕ್ಷೆ ಇದೆ. ಪೂರ್ವ ಮತ್ತು ದಕ್ಷಿಣ ಆಫ್ರಿಕಾ ವಲಯದಲ್ಲಿನ ಆಹಾರದ ಬೇಡಿಕೆಯನ್ನು ಆಮದಿನಿಂದ ತುಂಬಿಕೊಳ್ಳಬೇಕಾಗಿದೆ ಎಂದು ವರದಿ ಹೇಳಿದೆ.

**2%** ಅಕ್ಟೋಬರ್ ತಿಂಗಳಿನಲ್ಲಿ ಧಾನ್ಯಗಳು, ಸಕ್ಕರೆ, ಮಾಂಸ, ಡೇರಿ ಉತ್ಪನ್ನ ಮತ್ತು ತೈಲಗಳ ಬೆಲೆ ಶೇ. 2ರಷ್ಟು ಏರಿಕೆ

**ಆಹಾರ ಬೆಲೆ ಏರಿಕೆಗೆ ಏನು ಕಾರಣ?**

- ಹಲವು ದೇಶಗಳಲ್ಲಿ ಪ್ರತಿಕೂಲ ಹವಾಮಾನ ಪರಿಸ್ಥಿತಿ
- ಉತ್ತರ ಗೋಳಾರ್ಧದಲ್ಲಿ ಭಾರಿ ಮಳೆ
- ಬ್ರೆಜಿಲ್‌ನಲ್ಲಿ ಶುಷ್ಕ ಹವಾಮಾನದಿಂದ ಕೃಷಿ ಬಿಕ್ಕಟ್ಟು
- ಅನಿಶ್ಚಿತ ಮಳೆಯಿಂದಾಗಿ ಆಹಾರ ಉತ್ಪನ್ನಗಳ ಇಳುವರಿ ಕುಸಿತ
- ಹಣದುಬ್ಬರ ಇನ್ನಷ್ಟು ಏರುವ ಆತಂಕ, ಆಹಾರ ಉತ್ಪನ್ನ ಪೂರೈಕೆ ಕೊರತೆ

09-11-2024
Prajavani Pg 12

### ಗುಣಮಟ್ಟ ಕಳೆದುಕೊಂಡ ಸರಕು: ಗ್ರಾಹಕರಿಗೂ ತೊಂದರೆ

# ಈರುಳ್ಳಿ ಸಗಟು ಧಾರಣೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಒಂದು ವಾರದ ಅವಧಿಯಲ್ಲಿ ಇಲ್ಲಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ 'ಎ' ಗ್ರೇಡ್ ಈರುಳ್ಳಿಯ ಸಗಟು ದರವು ಕ್ವಿಂಟಲ್‌ಗೆ ₹1,000 ಏರಿಕೆಯಾಗಿದೆ.

ಇತ್ತೀಚೆಗೆ ಸುರಿದ ಮಳೆಯಿಂದಾಗಿ ರಾಜ್ಯದ ವಿವಿಧೆಡೆ ರೈತರು ಬೆಳೆದಿದ್ದ ಈರುಳ್ಳಿ ಫಸಲು ಹಾನಿಗೀಡಾಗಿತ್ತು. ಸದ್ಯ ಮಾರುಕಟ್ಟೆಗೆ ಗುಣಮಟ್ಟ ಕಳೆದುಕೊಂಡಿರುವ ಈರುಳ್ಳಿಯ ಆವಕ ಹೆಚ್ಚಾಗುತ್ತಿದೆ.

ವಾರದ ಹಿಂದೆ ಸ್ಥಳೀಯವಾಗಿ ಪೂರೈಕೆಯಾಗುವ 'ಎ' ಗ್ರೇಡ್ ಈರುಳ್ಳಿಗೆ ಪ್ರತಿ ಕ್ವಿಂಟಲ್‌ಗೆ ಗರಿಷ್ಠ ಸಗಟು ದರ ₹4,500 ಇತ್ತು. ಈಗ ₹5,500ಕ್ಕೆ ಮುಟ್ಟಿದೆ.

ಪ್ರಸ್ತುತ ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹45ರಿಂದ ₹65 ದರವಿದೆ. ಸಗಟು ದರ ಏರಿಕೆಯು ಇದೇ ರೀತಿ ಮುಂದುವರಿದರೆ ಚಿಲ್ಲರೆ ದರದಲ್ಲಿ ಸಹಜವಾಗಿ ಏರಿಕೆಯಾಗಲಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಶುಕ್ರವಾರದಂದು ಯಶವಂತಪುರ ಎಪಿಎಂಸಿಗೆ 94,182 ಚೀಲ (ಪ್ರತಿ ಚೀಲ 50 ಕೆ.ಜಿ) ಹಾಗೂ ದಾಸನಪುರ ಎಪಿಎಂಸಿಗೆ 968 ಚೀಲ ಈರುಳ್ಳಿ ಆವಕವಾಗಿದೆ. ಪ್ರಸ್ತುತ ಗದಗ, ಬಾಗಲಕೋಟೆ, ವಿಜಯಪುರ, ಚಿತ್ರದುರ್ಗ, ಹಿರಿಯೂರು, ಹೊಸದುರ್ಗ ಭಾಗದಲ್ಲಿ ಬೆಳೆದಿರುವ ಈರುಳ್ಳಿಯು ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗುತ್ತಿದೆ.

'ಮಾರುಕಟ್ಟೆಗೆ ಪೂರೈಕೆಯಾಗುವ ಈರುಳ್ಳಿ ಪೈಕಿ ಶೇ 90ರಷ್ಟು ಸರಕು ಮಳೆಗೆ ಸಿಲುಕಿ ಗುಣಮಟ್ಟ ಕಳೆದುಕೊಂಡಿದೆ. ಉಳಿದ ಶೇ 10ರಷ್ಟು ಸರಕಿಗಷ್ಟೇ ಉತ್ತಮ ಬೆಲೆ ಸಿಗುತ್ತಿದೆ. ಗುಣಮಟ್ಟ ಕಳೆದುಕೊಂಡಿರುವ ಈರುಳ್ಳಿಗೆ ಪ್ರತಿ ಕ್ವಿಂಟಲ್‌ಗೆ ₹500ರಿಂದ ₹1,500 ದರವಿದೆ. ಇದು ಬಹುಬೇಗ ಕೆಡುತ್ತದೆ. ಹಾಗಾಗಿ, ಇದನ್ನು ಬೇರೆ ರಾಜ್ಯಗಳು ಅಥವಾ ಜಿಲ್ಲೆಗಳಿಗೂ ಪೂರೈಸಲು ಆಗುತ್ತಿಲ್ಲ' ಎನ್ನುತ್ತಾರೆ ಸಗಟು ವರ್ತಕ ಕೆ. ನಾಗರಾಜ್.

'ಗುಣಮಟ್ಟ ಕಳೆದುಕೊಂಡಿರುವ ಈರುಳ್ಳಿಯನ್ನು ಮನೆಗಳಲ್ಲಿ ಹಲವು ದಿನದವರೆಗೆ ಸಂಗ್ರಹಿಸಿಟ್ಟುಕೊಳ್ಳಲು ಆಗುತ್ತಿಲ್ಲ. ಬಹುಬೇಗ ಕೊಳೆತು ಹೋಗುತ್ತಿದೆ. ಇದರಿಂದ ಹೆಚ್ಚು ಹಣ ನೀಡಿ ಖರೀದಿಸಿದ ಗ್ರಾಹಕರು ಕೂಡ ತೊಂದರೆ ಅನುಭವಿಸುವಂತಾಗಿದೆ' ಎಂಬುದು ಅವರ ವಿವರಣೆ.

## ಮಹಾರಾಷ್ಟ್ರದ ಸರಕಿಗೆ ಉತ್ತಮ ಬೆಲೆ

ಮಹಾರಾಷ್ಟ್ರದಿಂದ ಪೂರೈಕೆಯಾಗುವ 'ಎ' ಗ್ರೇಡ್ ಈರುಳ್ಳಿಯ ಪ್ರತಿ ಕೆ.ಜಿಗೆ ₹65ರಿಂದ ₹70 ದರವಿದೆ. ಅಲ್ಲಿಂದ ಹೊಸ ಸರಕು ಪೂರೈಕೆಯಾಗು-ವುದಿಲ್ಲ. ದಾಸ್ತಾನಿಟ್ಟುಕೊಂಡಿದ್ದ ಸರಕು ಪೂರೈಕೆಯಾಗುತ್ತಿದೆ ಎನ್ನುತ್ತಾರೆ ವರ್ತಕರು.

ಮಹಾರಾಷ್ಟ್ರದ ವ್ಯಾಪಾರಿಗಳು ಪ್ರತಿನಿತ್ಯ 5 ಸಾವಿರ ಚೀಲದಷ್ಟು ಈರುಳ್ಳಿಯನ್ನು ಇಲ್ಲಿನ ಮಾರುಕಟ್ಟೆಗೆ ಪೂರೈಸುತ್ತಾರೆ. 'ಬಿ' ಗ್ರೇಡ್ ಈರುಳ್ಳಿಗೆ ಕೆ.ಜಿಗೆ ₹60ರಿಂದ ₹65 ಬೆಲೆಯಿದೆ ಎಂಬುದು ಅವರ ವಿವರಣೆ.

## ದರ ಇಳಿಕೆ: ರೈತರಿಗೆ ಆತಂಕ

ಹುಬ್ಬಳ್ಳಿ: ಇಲ್ಲಿನ ಅಮರಗೋಳದ ಎಪಿಎಂಸಿಗೆ ಧಾರವಾಡ, ವಿಜಯಪುರ ಹಾಗೂ ಜಮಖಂಡಿಯಿಂದ ಈರುಳ್ಳಿ ಆವಕವಾಗುತ್ತಿದೆ.



ಕಳೆದ ವಾರ ಕ್ವಿಂಟಲ್‌ಗೆ ₹5,000 ಇದ್ದ ದರವು, ಶುಕ್ರವಾರ ₹4,000ಕ್ಕೆ ಇಳಿಕೆಯಾಗಿದೆ. ಒಂದು ವಾರದೊಳಗೆ ₹1,000 ಕಡಿಮೆಯಾಗಿದ್ದು, ಬೆಳೆಗಾರರು ಸಂಕಷ್ಟಕ್ಕೆ ಸಿಲುಕುವಂತಾಗಿದೆ.

'ಎಪಿಎಂಸಿಗೆ 32 ಸಾವಿರ ಕ್ವಿಂಟಲ್ ಈರುಳ್ಳಿ ಬಂದಿತ್ತು. ಮುಂದಿನ ತಿಂಗಳು ಪುಣೆಯಿಂದ ಈರುಳ್ಳಿ ಪೂರೈಕೆಯಾಗುವ ನಿರೀಕ್ಷೆಯಿದೆ. ಆಗ ದರ ಇನ್ನಷ್ಟು ಇಳಿಕೆ ಆಗಬಹುದು' ಎಂದು ಸ್ಥಳೀಯ ವ್ಯಾಪಾರಸ್ಥರು ಹೇಳುತ್ತಾರೆ.

ಬಾಗಲಕೋಟೆ ಎಪಿಎಂಸಿ ಮಾರುಕಟ್ಟೆಯಲ್ಲಿ ಕಳೆದ ವಾರಕ್ಕಿಂತ ಈ ವಾರ ಈರುಳ್ಳಿ ಬೆಲೆ ಕಡಿಮೆಯಾಗಿದೆ. ಹಿಂದಿನ ವಾರ ಕ್ವಿಂಟಲ್‌ಗೆ ₹1,300ರಿಂದ ₹ 5,000ದ ಇತ್ತು. ಈ ವಾರ ₹500ರಿಂದ ₹3,700ರ ವರೆಗೆ ಮಾರಾಟವಾಗಿದೆ.

'ಮಳೆ ಸುರಿದಿದ್ದರಿಂದ ಈರುಳ್ಳಿ ಹಸಿಯಾಗಿತ್ತು. ಇದರಿಂದ ಬೆಲೆ ಕುಸಿದಿದೆ. ಮುಂದಿನ ದಿನಗಳಲ್ಲಿ ಒಣ ಈರುಳ್ಳಿ ಬರುವುದರಿಂದ ಕ್ವಿಂಟಲ್‌ಗೆ ₹5,000 ದರ ಏರಿಕೆ ಆಗಬಹುದು' ಎಂದು ವಾಪಾರಸ್ಥರು ಹೇಳುತ್ತಾರೆ.

ಬೆಳಗಾವಿ ಎಪಿಎಂಸಿಯಲ್ಲಿ ಈರುಳ್ಳಿ ಕನಿಷ್ಠ ದರ ಕ್ವಿಂಟಲ್‌ಗೆ ₹1,000 ಹಾಗೂ ಗರಿಷ್ಠ ದರ ₹4,200 ಇದೆ.

'ಗದಗ ಮಾರುಕಟ್ಟೆಯಲ್ಲಿ ಉತ್ತಮ ದರ ಸಿಗುತ್ತಿದೆ. ಚಿಲ್ಲರೆ ದರ ಕೂಡ ಏರಿಕೆಯಾಗಿದೆ. ದೀಪಾವಳಿಗೂ ಮುನ್ನ ಕ್ವಿಂಟಲ್‌ಗೆ ₹1,000ದಿಂದ ₹1,500 ದರ ಇತ್ತು. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದರು. ಹಬ್ಬ ಮುಗಿಯುತ್ತಿದ್ದಂತೆ ಬೆಲೆ ಹೆಚ್ಚಳವಾಗಿದೆ. ಗುಣಮಟ್ಟದ ಈರುಳ್ಳಿಗೆ ₹3,500ರಿಂದ ₹5,000ದ ವರೆಗೆ ದರವಿದೆ' ಎಂದು ಬೆಳೆಗಾರರು ಹೇಳುತ್ತಾರೆ.

# 22 ಸಾವಿರ ಟನ್ ಉದ್ದು ಆಮದು

ನವದೆಹಲಿ (ಪಿಟಿಐ): ಭಾರತದ ಬೇಡಿಕೆಗೆ ಅನುಗುಣವಾಗಿ ಅಗತ್ಯವಿರುವ ಉದ್ದು ಮತ್ತು ತೊಗರಿ ಬೇಳೆ ಪೂರೈಕೆಯಲ್ಲಿ ಬ್ರೆಜಿಲ್ ಪ್ರಮುಖ ದೇಶವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.



ಬ್ರೆಜಿಲ್‌ನ ಕೃಷಿ ಸಚಿವಾಲಯದ ಹಿರಿಯ ಅಧಿಕಾರಿ ಜೂಲಿಯೊ ಸೀಸರ್ ರಾಮೋಸ್ ನೇತೃತ್ವದ ನಿಯೋಗವು ಗುರುವಾರ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ಅವರನ್ನು ಭೇಟಿ ಮಾಡಿ, ಆಮದು ಕುರಿತಂತೆ ಚರ್ಚಿಸಿತು.

ಕಳೆದ ವರ್ಷ ಬ್ರೆಜಿಲ್‌ನಿಂದ 4,102 ಟನ್‌ನಷ್ಟು ಉದ್ದು ಆಮದು ಮಾಡಿಕೊಳ್ಳಲಾಗಿತ್ತು, ಪ್ರಸಕ್ತ ವರ್ಷದ ಅಕ್ಟೋಬರ್ ಅಂತ್ಯದವರೆಗೆ 22 ಸಾವಿರ ಟನ್ ಆಮದು ಮಾಡಿಕೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಭಾರತದಲ್ಲಿ ಬೇಳೆಕಾಳು ಬಿತ್ತನೆ ಅವಧಿಯಲ್ಲಿಯೇ ಬ್ರೆಜಿಲ್ ಮತ್ತು ಆಸ್ಟ್ರೇಲಿಯಾದಲ್ಲೂ ಬಿತ್ತನೆ ಮಾಡಲಾಗುತ್ತದೆ. ಹಾಗಾಗಿ, ಇಲ್ಲಿನ ಫಸಲಿನ ಇಳುವರಿಯನ್ನು ಅವಲೋಕಿಸಿ ಆ ದೇಶಗಳಲ್ಲಿ ಬಿತ್ತನೆ ಮಾಡಲಾಗುತ್ತದೆ. ಹಾಗಾಗಿ, ದೇಶೀಯವಾಗಿ ಬೇಳೆಕಾಳುಗಳ ಕೊರತೆ ಎದುರಾದಾಗ ಅಲ್ಲಿಂದ ಆಮದು ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ವಿವರಿಸಿದೆ.

ಹಿಂಗಾರು ಅವಧಿಯಲ್ಲಿ ದೇಶದಲ್ಲಿ ಕಡಲೆ ಕಾಳು ಉತ್ಪಾದನೆ ಕಡಿಮೆಯಾಗಲಿದೆ ಎಂದು ಅಂದಾಜಿಸಿದ್ದ ಕೇಂದ್ರ ಸರ್ಕಾರವು, ಮೇ ತಿಂಗಳಿನಲ್ಲಿ ಕಡಲೆ ಕಾಳು ಮೇಲಿನ ಆಮದು ಸುಂಕವನ್ನು ಹಿಂಪಡೆಯಿತು. ಹಾಗಾಗಿ, ಆಸ್ಟ್ರೇಲಿಯಾದಲ್ಲಿ ಕಡಲೆ ಬಿತ್ತನೆ ಪ್ರದೇಶದಲ್ಲಿ ಏರಿಕೆಯಾಗಿದೆ. ಅಲ್ಲಿ ಕಳೆದ ವರ್ಷ 4.9 ಲಕ್ಷ ಟನ್ ಉತ್ಪಾದನೆಯಾಗಿತ್ತು. ಈ ಬಾರಿ 13.3 ಲಕ್ಷ ಟನ್ ಹೆಚ್ಚಳವಾಗುವ ನಿರೀಕ್ಷೆಯಿದೆ. ಭಾರತಕ್ಕೆ ರಫ್ತು ಮಾಡುವ ಉದ್ದೇಶದಿಂದ ಅಲ್ಲಿ ಉತ್ಪಾದನೆಯನ್ನು ಹೆಚ್ಚಿಸಲಾಗಿದೆ ಎಂದು ವಿವರಿಸಿದೆ.

# ಮೆಣಸಿನಕಾಯಿ ಆವಕ ಚೇತರಿಕೆ

ಪ್ರಜಾವಾಣಿ ವಾರ್ತೆ



ಬ್ಯಾಡಗಿ (ಹಾವೇರಿ ಜಿಲ್ಲೆ): ಇಲ್ಲಿನ ಮಾರುಕಟ್ಟೆಗೆ ಶುಕ್ರವಾರ 28,431 ಚೀಲ (7,107 ಕ್ವಿಂಟಲ್) ಮೆಣಸಿನಕಾಯಿಯನ್ನು ಮಾರಾಟಕ್ಕೆ ತರಲಾಗಿದ್ದು, ಆವಕದಲ್ಲಿ ಹೆಚ್ಚಳವಾಗಿದೆ.

ದೀಪಾವಳಿ ಹಬ್ಬದ ಬಳಿಕ ಹೊಸ ಹಂಗಾಮು ಆರಂಭವಾಗಿದೆ. ಬಳ್ಳಾರಿ, ರಾಯಚೂರು, ಅಜ್ಜಂಪುರ ಮತ್ತಿತರ ಭಾಗದಲ್ಲಿ ಬೆಳೆದ ಮೆಣಸಿನಕಾಯಿಯನ್ನು ಮಾರಾಟಕ್ಕೆ ತರಲಾಗುತ್ತಿದೆ.

ಈ ಬಾರಿಯೂ ಉತ್ತಮ ಫಸಲು ನಿರೀಕ್ಷಿಸಲಾಗಿದೆ. ಜನವರಿ ವೇಳೆಗೆ ಬಂಪರ್ ಬೆಳೆ ಬರುವ ನಿರೀಕ್ಷೆಯಿದೆ. ಮಾರುಕಟ್ಟೆಯಲ್ಲಿ ಗುಣಮಟ್ಟದ ಮೆಣಸಿನಕಾಯಿಗೆ ಉತ್ತಮ ಬೆಲೆ ಸಿಗುತ್ತಿದೆ.

ಕಳೆದ ವರ್ಷವೂ ಮಾರುಕಟ್ಟೆಗೆ ಮೆಣಸಿನಕಾಯಿ ಹೆಚ್ಚು ಪೂರೈಕೆಯಾಗಿದ್ದು, ಶೀಥಲೀಕರಣ ಘಟಕಗಳಲ್ಲಿ ಸಂಗ್ರಹಿಸ-ಲಾಗಿದೆ. ಸದ್ಯ ಮಾರಾಟ ಕಡಿಮೆಯಿದೆ. ಇದರಿಂದ ಬೆಲೆಯಲ್ಲಿ ಚೇತರಿಕೆ ಕಂಡುಬಂದಿಲ್ಲ ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.

ಶುಕ್ರವಾರ ಮಾರುಕಟ್ಟೆಯಲ್ಲಿ 1,074 ಲಾಟ್ ಮೆಣಸಿನಕಾಯಿ ಚೀಲಗಳನ್ನು ಟೆಂಡರ್‌ಗೆ ಇಡಲಾಗಿದ್ದು, ಈ ಪೈಕಿ ತೇವಾಂಶ ಹೆಚ್ಚಿರುವ ಹಾಗೂ ಗುಣಮಟ್ಟದ ಕೊರತೆ ಇರುವ 102 ಲಾಟ್‌ಗಳಿಗೆ ವರ್ತಕರು ಟೆಂಡರ್ ನಮೂದಿಸಿಲ್ಲ.

ಪ್ರತಿ ಕ್ವಿಂಟಲ್ ಡಬ್ಬಿ ಮೆಣಸಿನಕಾಯಿ ₹29,200, ಕಡ್ಡಿ ಮೆಣಸಿನಕಾಯಿ ₹25,000 ಮತ್ತು ಗುಂಟೂರು ತಳಿ ಮೆಣಸಿನಕಾಯಿ ₹16,509ಕ್ಕೆ ಮಾರಾಟವಾಗಿದೆ ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.